ಕರ್ನಾಟಕ ಸರ್ಕಾರ

# ಪದವಿ ಪೂರ್ವ ಶಿಕ್ಷಣ ಇಲಾಖೆ

**18 ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12**

---

**ಕ್ರಮ ಸಂಖ್ಯೆ : ಪಪೂಶಿಇ/ಪರೀಕ್ಷೆ/11/ಪ್ರ.ಪಿ.ಯು.ಸಿ.ಉ-01/2020-21** ದಿನಾಂಕ : 09-09-2020

## : ಸುತ್ತೋಲೆ :

ವಿಷಯ : **ಕೋವಿಡ್-19** ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ಪೂರಕ ಪರೀಕ್ಷೆಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕ್ರಮಗಳ ಕುರಿತು.

ಉಲ್ಲೇಖ : ನಿರ್ದೇಶಕರ ಕಚೇರಿ ಸುತ್ತೋಲೆ ಸಂಖ್ಯೆ : ಪಪೂಶಿಇ/ಶೈಶಾ/ಆನ್.ಕ್ಲಾ/2020-21, ದಿನಾಂಕ : 13-07-2020.

~ ~ ~ ~ ~ ~

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ 2019-20 ನೇ ಶೈಕ್ಷಣಿಕ ಸಾಲಿನ ಫೆಬ್ರವರಿ-2020 ರ ಪ್ರಥಮ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ **ದಿನಾಂಕ : 16-07-2020** ರಿಂದ **27-07-2020 ರವರೆಗೆ ಕಾಲೇಜು ಹಂತದಲ್ಲಿಯೇ ಪೂರಕ ಪರೀಕ್ಷೆ ನಡೆಸಲು ಇಲಾಖೆಯ ಸುತ್ತೋಲೆ ಸಂಖ್ಯೆ : ಪಪೂಶಿಇ/ಪರೀಕ್ಷೆ/ಪ್ರ.ಪಿ.ಪೂ./85/201-20, ದಿನಾಂಕ : 07-07-2020** ರಲ್ಲಿ ಸೂಚಿಸಲಾಗಿತ್ತು.

ಕೋವಿಡ್-19 ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಆರೋಗ್ಯದ ಹಿತದೃಷ್ಠಿಯಿಂದ 2020 ರ ಫೆಬ್ರವರಿ ತಿಂಗಳ ಪ್ರಥಮ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದ (ಹಾಜರಾತಿ ಕೊರತೆಯಿಂದಾಗಿ 2020 ರ ಫೆಬ್ರವರಿ ವಾರ್ಷಿಕ ಪರೀಕ್ಷೆ ಬರೆಯಲು ಅನರ್ಹಗೊಂಡ ವಿದ್ಯಾರ್ಥಿಗಳನ್ನು ಹೊರತುಪಡಿಸಿ) ವಿದ್ಯಾರ್ಥಿಗಳಿಗೆ ಮಾತ್ರ ಪ್ರಥಮ ಪಿಯುಸಿ ತರಗತಿಯಲ್ಲಿ ಉತ್ತೀರ್ಣತೆ ಪಡೆಯಲು ವಿಷಯವಾರು ಅಗತ್ಯವಾಗಿ ಬೇಕಾಗಿರುವ ಕನಿಷ್ಠ ಅಂಕಗಳನ್ನು ಕಾಲೇಜು ಹಂತದಲ್ಲಿಯೇ ನೀಡಿ ಉತ್ತೀರ್ಣವೆಂದು ಘೋಷಿಸಿ, ದ್ವಿತೀಯ ಪಿಯುಸಿಗೆ ದಾಖಲಾಗಲು ಅವಕಾಶ ಕಲ್ಪಿಸುವಂತೆ ಆದೇಶ ನೀಡಲಾಗಿತ್ತು.

**ಮುಂದುವರೆದು, 2020 ರ ಫೆಬ್ರವರಿಯ ಪ್ರಥಮ ಪಿಯುಸಿ ವಾರ್ಷಿಕ ಪರೀಕ್ಷೆಗೂ ಹಿಂದಿನ ಶೈಕ್ಷಣಿಕ ಸಾಲಿನಲ್ಲಿ, ಪ್ರಥಮ ಪಿಯುಸಿ ಪರೀಕ್ಷೆಗೆ ಅರ್ಹರಿದ್ದು ಗೈರು ಹಾಜರಾಗಿರುವ ಮತ್ತು ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳೂ ಸಹ, ಮೇಲ್ಕಂಡ ಉಲ್ಲೇಖಿತ ಸುತ್ತೋಲೆಯ ದಿನಾಂಕ : 13-07-2020 ಕ್ಕೂ ಮುಂಚಿತವಾಗಿ 2020 ರ ಪ್ರಥಮ ಪಿಯುಸಿ ಪೂರಕ ಪರೀಕ್ಷೆಗೆ ಪರೀಕ್ಷಾ ಶುಲ್ಕವನ್ನು ಪಾವತಿಸಿದ್ದಲ್ಲಿ ಮಾತ್ರ ಅಂತಹ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಠಿಯಿಂದ ಅವರುಗಳನ್ನು ಉತ್ತೀರ್ಣ ಎಂದು ಘೋಷಿಸಿ, ದ್ವಿತೀಯ ಪಿಯುಸಿ ತರಗತಿಗಳಿಗೆ ದಾಖಲಾತಿ ಮಾಡಿಕೊಳ್ಳಲು ಸೂಚಿಸಿದೆ.**

ಹಾಗೂ ಜಿಲ್ಲಾ ಉಪ ನಿರ್ದೇಶಕರು ಈ ಪ್ರಕ್ರಿಯೆಯಲ್ಲಿ ವೈಯಕ್ತಿಕವಾಗಿ ಗಮನ ಹರಿಸಿ ಸೂಕ್ತ ಕ್ರಮ ವಹಿಸುವುದು ಮತ್ತು ಸಂಬಂಧಪಟ್ಟ ಕಾಲೇಜಿನ **ಪ್ರಾಚಾರ್ಯರು ಕಾಲೇಜು ಪುನರಾರಂಭವಾದ ನಂತರ ಅಂತಹ ಫಲಿತಾಂಶಗಳನ್ನು ಜಿಲ್ಲಾ ಉಪ ನಿರ್ದೇಶಕರಿಂದ ಘಟನೋತ್ತರವಾಗಿ ದೃಢೀಕರಿಸಿಕೊಳ್ಳತಕ್ಕದ್ದೆಂದು** ಈ ಮೂಲಕ ಸೂಚಿಸಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

ಪ್ರತಿಗಳು :

1. ನಿರ್ದೇಶಕರ ಆಪ್ತಶಾಖೆ.
2. ಜಂಟಿ ನಿರ್ದೇಶಕರು (ಶೈಕ್ಷಣಿಕ ಶಾಖೆ)
3. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು.
4. ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಚಾರ್ಯರು.
5. ಕಚೇರಿ ಪ್ರತಿ.
6. e-governance.